**All India Radio: Bangalore**
**National Bulletin In Kannada**
**09.03.2026 13.10 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**09..03.2026 13.10 hrs**

**<><><*><><<>**

ಮುಖ್ಯಾಂಶಗಳು

**೧.ಇತ್ತೀಚಿನ ವರ್ಷಗಳಲ್ಲಿ ಭಾರತದ ಆರೋಗ್ಯ ಮೂಲಸೌಕರ್ಯಕ್ಕೆ ಮತ್ತಷ್ಟು ಬಲ - ಪ್ರಧಾನಿ ನರೇಂದ್ರ ಮೋದಿ**

**೨.ಪಶ್ಚಿಮ-ಏಷ್ಯಾ ಸಂಘರ್ಷ; ರಾಜತಾಂತ್ರಿಕ ಮಾತುಕತೆಗೆ ಭಾರತ ಒತ್ತು, ನಾಗರಿಕರ ರಕ್ಷಣೆಗೆ ಆದ್ಯತೆ - ರಾಜ್ಯಸಭೆಯಲ್ಲಿ ಕೇಂದ್ರ ಸಚಿವ ಡಾ.ಎಸ್.ಜೈಶಂಕರ್ ಹೇಳಿಕೆ**

**೩.ಸಂಸತ್ತಿನ ಉಭಯ ಸದನಗಳಲ್ಲಿ ಐಸಿಸಿ ಟಿ-೨೦ ವಿಶ್ವಕಪ್ ವಿಜೇತ ಭಾರತ ತಂಡಕ್ಕೆ ಅಭಿನಂದನೆ**

**೪.೧೧ನೇ ಆವೃತ್ತಿಯ ಜಂಟಿ ಸಮರಾಭ್ಯಾಸ ಲ್ಯಾಮಿತಿಯೆಗಾಗಿ ಸೀಶೆಲ್ಸ್ ತಲುಪಿದ ಭಾರತೀಯ ರಕ್ಷಣಾಪಡೆ ತುಕಡಿ**

**೫.ಎಫ್ಐಹೆಚ್ ಮಹಿಳಾ ಹಾಕಿ ವಿಶ್ವಕಪ್ ಅರ್ಹತಾ ಸುತ್ತು ; 'ಪೂಲ್ ಬಿ' ಪಂದ್ಯದಲ್ಲಿಂದು ಭಾರತ-ಸ್ಕಾಟ್ಲೆಂಡ್ ಸೆಣಸು**

**<><><*><><<>**

ಕಳೆದ ಕೆಲವು ವರ್ಷಗಳಲ್ಲಿ ಭಾರತದ ಆರೋಗ್ಯ ಮೂಲಸೌಕರ್ಯ ಗಣನೀಯವಾಗಿ ಬಲಗೊಂಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಸಬ್ ಕಾ ಸಾಥ್, ಸಬ್ ಕಾ ವಿಕಾಸ್-ಜನರ ಆಕಾಂಕ್ಷೆಗಳ ಈಡೇರಿಕೆ ಎಂಬ ವಿಷಯದ ಕುರಿತು ಇಂದು ಆಯೋಜಿಸಲಾಗಿದ್ದ ಬಜೆಟ್ ನಂತರದ ವೆಬಿನಾರ್ ಉದ್ದೇಶಿಸಿ ಮಾತನಾಡಿದ ಅವರು, ಜನರ ಆಕಾಂಕ್ಷೆಗಳ ಈಡೇರಿಕೆ ಕೇವಲ ಚರ್ಚಾ ವಿಷಯವಲ್ಲ. ಬದಲಿಗೆ ಸರ್ಕಾರದ ಬಜೆಟ್‌ನ ಮೂಲ ಆಶಯ ಮತ್ತು ಬದ್ಧತೆಯಾಗಿದೆ ಎಂದು ಪ್ರತಿಪಾದಿಸಿದರು. ದೇಶದ ಹಲವು ಜಿಲ್ಲೆಗಳಲ್ಲಿ ನೂತನ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವ ಮೂಲಕ ರೋಗ ನಿರೋಧಕ ಮತ್ತು ಸಮಗ್ರ ಆರೋಗ್ಯದ ದೃಷ್ಟಿಕೋನದೊಂದಿಗೆ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ್ ಯೋಜನೆ ಮತ್ತು ಆರೋಗ್ಯ ಮಂದಿರಗಳ ಮೂಲಕ ದೇಶದ ಹಳ್ಳಿ ಹಳ್ಳಿಗೂ ಆರೋಗ್ಯ ಸೇವೆಗಳನ್ನು ವಿಸ್ತರಿಸಲಾಗುತ್ತಿದೆ. ಭಾರತದ ಪರಂಪರೆಯ ಭಾಗವಾದ ಯೋಗ ಮತ್ತು ಆಯುರ್ವೇದ ಜಗತ್ತಿನಾದ್ಯಂತ ಜನಪ್ರಿಯತೆ ಗಳಿಸುತ್ತಿದೆ ಎಂದು ತಿಳಿಸಿದರು. ವಿಜ್ಞಾನ ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತ-ಸ್ಟೆಮ್ ಕ್ಷೇತ್ರಗಳಲ್ಲಿ ಮಹಿಳೆಯರ ಹೆಚ್ಚುತ್ತಿರುವ ಪಾಲ್ಗೊಳ್ಳುವಿಕೆಯ ಕುರಿತು ಸಂತಸ ವ್ಯಕ್ತಪಡಿಸಿರುವ ಪ್ರಧಾನಿ ಭವಿಷ್ಯದ ತಂತ್ರಜ್ಞಾನಗಳಲ್ಲಿ ಹೆಣ್ಣು ಮಕ್ಕಳಿಗೆ ಸಮಾನ ಅವಕಾಶಗಳನ್ನು ಒದಗಿಸಲು ಸರ್ಕಾರ ಬದ್ಧವಾಗಿವೆ

ಎಂದರು. ಯುವ ಸಂಶೋಧಕರು ಯಾವುದೇ ಅಡೆತಡೆಗಳಿಲ್ಲದೇ ನಾವೀನ್ಯತೆ ಮತ್ತು ಪ್ರಯೋಗಗಳನ್ನು ನಡೆಸಲು ಪೂರಕ ಸದೃಢ ಸಂಶೋಧನಾ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಅಗತ್ಯತೆ ಇದೆ ಎಂದರು.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ (೨೪ ಸೆಕೆಂಡ್‌ಗಳು)**

**<>><><*><><<>**

ಪಶ್ಚಿಮ ಏಷ್ಯಾ ಪರಿಸ್ಥಿತಿಯನ್ನು ಭಾರತ ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಸಂಬಂಧಿತ ಸಚಿವಾಲಯಗಳು ಪರಿಣಾಮಕಾರಿ ಪ್ರತಿಕ್ರಿಯೆ ಖಚಿತಪಡಿಸಲು ಸಮನ್ವಯದಿಂದ ಕಾರ್ಯ ನಿರ್ವಹಿಸುತ್ತಿವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಸದನಕ್ಕೆ ತಿಳಿಸಿದ್ದಾರೆ. ರಾಜ್ಯಸಭೆಯಲ್ಲಿಂದು ಈ ಕುರಿತು ಮಹತ್ವ ಹೇಳಿಕೆ ನೀಡಿದ ಅವರು, ಪರಿಸ್ಥಿತಿಯ ಗಂಭೀರತೆ ಪರಿಗಣಿಸಿ ಭಾರತೀಯ ನಾಗರಿಕರ ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಆದ್ಯತೆ ನೀಡುತ್ತಿದೆ. ಪ್ರದೇಶದಲ್ಲಿ ಉದ್ವಿಘ್ನತೆ ಕಡಿಮೆ ಮಾಡಲು ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗಗಳೇ ಪರಿಹಾರ ಎಂದು ಭಾರತ ನಂಬಿದೆ ಎಂಬುದಾಗಿದೆ ಸಚಿವರು ಪುನರುಚ್ಚರಿಸಿದರು. ಕಳೆದ ಜನವರಿಯಲ್ಲಿಯೇ ಇರಾನ್‌ನಲ್ಲಿರುವ ಭಾರತೀಯರಿಗೆ ಅನಗತ್ಯ ಪ್ರಯಾಣ ಕೈಗೊಳ್ಳದಂತೆ ಎಚ್ಚರಿಕೆ ನೀಡಲಾಗಿತ್ತು. ಹಾಗೂ ಜಾಗರೂಕರಾಗಿರುವಂತೆ ಸೂಚಿಸಲಾಗಿತ್ತು. ಪರಿಸ್ಥಿತಿ ನಿಭಾಯಿಸಲು ಪ್ರಧಾನಿ ನರೇಂದ್ರ ಮೋದಿ ಖುದ್ದಾಗಿ ಬೆಳವಣಿಗೆಗಳನ್ನು ಗಮನಿಸುತ್ತಿದ್ದು, ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲ ಸಚಿವರಿಗೆ ನಿರ್ದೇಶನ ನೀಡಿದ್ದಾರೆ ಎಂದರು. ಶಾಂತಿ ಸ್ಥಾಪನೆಯ ಪ್ರಯತ್ನದ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ, ಯುಎಇ, ಕತಾರ್, ಸೌದಿ-ಅರೇಬಿಯಾ, ಓಮನ್, ಜಾರ್ಡಾನ್, ಇಸ್ರೇಲ್ ಹಾಗೂ ಬಹ್ರೇನ್ ರಾಷ್ಟ್ರಗಳ ಮುಖ್ಯಸ್ಥರೊಂದಿಗೆ ದೂರವಾಣಿ ಮೂಲಕ ಚರ್ಚಿಸಿ ಪರಿಸ್ಥಿತಿ ತಿಳಿಗೊಳಿಸುವಂತೆ ಮನವಿ ಮಾಡಿದ್ದಾರೆ. ಗಲ್ಫ್ ರಾಷ್ಟ್ರಗಳಲ್ಲಿ ಸುಮಾರು ೧ ಕೋಟಿ ಭಾರತೀಯ ನಾಗರಿಕರು ನೆಲೆಸಿದ್ದು, ವಿವಿಧ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಭಾರತದ ಇಂಧನ ಭದ್ರತೆ, ತೈಲ ಮತ್ತು ಅನಿಲ ಪೂರೈಕೆಗೆ ನಿರ್ಣಾಯಕವಾಗಿರುವ ಗಲ್ಫ್ ಪ್ರದೇಶ, ದೇಶದ ಪ್ರಮುಖ ವ್ಯಾಪಾರ ಪಾಲುದಾರವಾಗಿದ್ದು, ವಾರ್ಷಿಕ ಸುಮಾರು ೨೦೦ ಶತಕೋಟಿ ಡಾಲರ್ ಮೊತ್ತದ ವಹಿವಾಟು ನಡೆಯುತ್ತಿದೆ ಎಂದು ತಿಳಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿರುವ ಸಮುದ್ರಯಾನ ಮತ್ತು ಹಡಗು ಸಾಗಣೆಯ ಮೇಲೂ ಈ ಸಂಘರ್ಷ ಪರಿಣಾಮ ಬೀರಿದೆ. ಈ ನಡುವೆ ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಅಲ್ಲಿನ ಹಲವು ಭಾರತೀಯ ವಿದ್ಯಾರ್ಥಿಗಳ ಸ್ಥಳಾಂತರಕ್ಕೆ ಅಗತ್ಯ ಸೌಲಭ್ಯ ಕಲ್ಪಿಸಿಕೊಟ್ಟಿದೆ. ಇದರ ಜೊತೆಗೆ ವ್ಯಾಪಾರ ನಿಮಿತ್ತ ಇರಾನ್‌ನಲ್ಲಿದ್ದ ಭಾರತೀಯ ನಾಗರಿಕರು ಅಲ್ಲಿಂದ ಸುರಕ್ಷಿತವಾಗಿ ಭಾರತಕ್ಕೆ ಮರಳಲು ರಾಯಭಾರ ಕಚೇರಿ ನೆರವು ನೀಡಿದೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಮಾಹಿತಿ ನೀಡಿದ್ದಾರೆ.

**ಧ್ವನಿ : ಡಾ.ಎಸ್.ಜೈಶಂಕರ್ (೨೯ ಸೆಕೆಂಡ್‌ಗಳು)**

**<>><><*><><<>**

ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಹಂತದ ಕಲಾಪ ಇಂದು ಆರಂಭವಾಗಿದೆ. ಇಂದು ಬೆಳಗ್ಗೆ ೧೧ ಗಂಟೆಗೆ ಲೋಕಸಭೆ ಕಲಾಪ ಆರಂಭವಾಗುತ್ತಿದ್ದಂತೆ ಇತ್ತೀಚೆಗೆ ನಿಧನರಾದ ಶಿಲ್ಲಾಂಗ್ ಕ್ಷೇತ್ರದ ಹಾಲಿ ಸಂಸದ ಹಾಗೂ ವಾಯ್ಸ್ ಆಫ್ ದಿ ಪೀಪಲ್ ಪಕ್ಷದ ನಾಯಕ ಡಾ.ರಿಕ್ಕಿ ಹ್ಯಾಂಡ್ರ್ಯೂ ಸಿಂಕಾನ್ ಅವರಿಗೆ ಸದನ ಶ್ರದ್ಧಾಂಜಲಿ ಸಲ್ಲಿಸಿತು. ಜೊತೆಗೆ ಮಾಜಿ ಸದಸ್ಯರಾದ ಸುಶೀಲಾ ತಿರಿಯಾ ದೇವಿ ಬಿಕ್ಸ್‌ಸಿಂಗ್, ಪೂರ್ಣಮಾಸಿ ರಾಮ್ ಮತ್ತು ಕೆ.ಪಿ.ಉನ್ನಿಕೃಷ್ಣನ್ ಅವರಿಗೂ ಸಂತಾಪ ಸೂಚಿಸಲಾಯಿತು. ಆಗಲಿದ ಗಣ್ಯರ ಗೌರವಾರ್ಥ ಸದನ ಕೆಲಕಾಲ ಮೌನ ಆಚರಿಸಿತು. ಬಳಿಕ ಸಭಾಧ್ಯಕ್ಷರು ಕಲಾಪವನ್ನು ೧೨ ಗಂಟೆಗೆ ಮುಂದೂಡಿದರು. ೧೨ ಗಂಟೆಗೆ ಸದನ ಮತ್ತೆ ಸಮಾವೇಶಗೊಂಡಾಗ ಐಸಿಸಿ ಪುರುಷರ ಟಿ-೨೦ ವಿಶ್ವಕಪ್ ಕಿರೀಟ ಮುಡಿಗೇರಿಸಿಕೊಂಡ ಭಾರತದ ಕ್ರಿಕೆಟ್ ತಂಡಕ್ಕೆ ಅಭಿನಂದನೆ ಸಲ್ಲಿಸಲಾಯಿತು. ಪೀಠಾಸೀನಾಧಿಕಾರಿ ಜಗದಾಂಬಿಕ ಪಾಲ್, ಭಾರತದ ಈ ವಿಜಯ ದೇಶಾದ್ಯಂತ ಉತ್ಸಾಹ ಮತ್ತು ಸಂಭ್ರಮದ ವಾತಾವರಣವನ್ನು ಸೃಷ್ಟಿಸಿದೆ. ಟೂರ್ನಿಯುದ್ಧಕ್ಕೂ ಭಾರತ ತಂಡ ತೋರಿದ ಅಪ್ರತಿಮ ಕೌಶಲ್ಯ, ದೃಢ ಸಂಕಲ್ಪ, ಶಿಸ್ತಿನ ಪ್ರದರ್ಶನ, ಶ್ಲಾಘನೀಯ ಎಂದರು. ಈ ಗೆಲುವು ದೇಶದ ಲಕ್ಷಾಂತರ ಯುವ ಜನರಿಗೆ ದೊಡ್ಡ ಕನಸು ಕಾಣಲು ಮತ್ತು ಕ್ರೀಡಾಕ್ಷೇತ್ರದಲ್ಲಿ ಉತ್ಕೃಷ್ಟತೆ ಸಾಧಿಸಲು ಸ್ಫೂರ್ತಿ ನೀಡಿದೆ ಎಂದು ತಿಳಿಸಿದರು.

**<>><><*><><<>**

ರಾಜ್ಯಸಭೆಯಲ್ಲಿಂದು ಐಸಿಸಿ ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಸೋಲಿಸಿ ಭರ್ಜರಿ ಜಯ ದಾಖಲಿಸಿದ ಭಾರತೀಯ ಕ್ರಿಕೆಟ್ ತಂಡಕ್ಕೆ ಅಭಿನಂದನೆ ಸಲ್ಲಿಸಲಾಯಿತು. ರಾಜ್ಯಸಭಾಪತಿ ಸಿ.ಪಿ.ರಾಧಾಕೃಷ್ಣನ್ ತಂಡದ ಈ ಐತಿಹಾಸಿಕ ಸಾಧನೆಯನ್ನು ಶ್ಲಾಘಿಸಿ, ಭಾರತ ೩ನೇ ಬಾರಿಗೆ ಟಿ-೨೦ ವಿಶ್ವಕಪ್ ಕಿರೀಟ ಮುಡಿಗೇರಿಸಿಕೊಂಡಿರುವುದು ಹೆಮ್ಮೆಯ ವಿಷಯ ಎಂದಿದ್ದಾರೆ. ಕಳೆದ ಆವೃತ್ತಿಯಲ್ಲಿ ಚಾಂಪಿಯನ್ ಆಗಿದ್ದ ಭಾರತ ಸತತ ೨ನೇ ಬಾರಿ ಪ್ರಶಸ್ತಿ ಉಳಿಸಿಕೊಂಡು ದಾಖಲೆ ನಿರ್ಮಿಸಿದೆ ಎಂದು ಅವರು ತಿಳಿಸಿದರು. ಇದಕ್ಕೂ ಮುನ್ನ ಬೆಳಗ್ಗೆ ೧೧ ಗಂಟೆಗೆ ಮೇಲ್ಮನೆ ಕಲಾಪ ಆರಂಭವಾದಾಗ ಇತ್ತೀಚೆಗೆ ನಿಧನರಾದ ಸದನದ ಮಾಜಿ ಸದಸ್ಯರಾದ ಮುಕುಲ್ ರಾಯ್ ಡಾ.ಜನಾರ್ಧನ್ ವಾಘ್ಮಾರೆ ಹಾಗೂ ಎಚ್.ಕೆ.ದುವ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಆಗಲಿದ ಗಣ್ಯರ ಗೌರವಾರ್ಥ ಸದನ ಕೆಲಕಾಲ ಮೌನ ಆಚರಿಸಿತು.

**<>><><*><><<>**

ಮುಂಬರುವ ರಾಜ್ಯಸಭೆಯ ದ್ವೈವಾರ್ಷಿಕ ಚುನಾವಣೆಯ ಹಿನ್ನೆಲೆಯಲ್ಲಿ ಭಾರತೀಯ ಜನತಾ ಪಕ್ಷ ಬಿಹಾರ, ಒಡಿಶಾ ಮತ್ತು ಹರಿಯಾಣ ರಾಜ್ಯಗಳಿಗೆ ಕೇಂದ್ರೀಯ ವೀಕ್ಷಕರನ್ನು ನೇಮಕ ಮಾಡಿದೆ. ಬಿಹಾರದ ಚುನಾವಣಾ ಪ್ರಕ್ರಿಯೆ ಮೇಲ್ವಿಚಾರಣೆ ಮಾಡಲು ಛತ್ತೀಸ್‌ಗಢ ಉಪಮುಖ್ಯಮಂತ್ರಿ ವಿಜಯ್ ಶರ್ಮ ಮತ್ತು ಕೇಂದ್ರ ಸಚಿವ ಹರ್ಷ್ ಮಲ್ಹೋತ್ರ ಅವರನ್ನು ನಿಯೋಜಿಸಲಾಗಿದ್ದು, ಒಡಿಶಾದ ಜವಾಬ್ದಾರಿಯನ್ನು ಮಹಾರಾಷ್ಟ್ರ ಸರ್ಕಾರದ ಸಚಿವ ಚಂದ್ರಶೇಖರ್ ಭಾವಂಕುಳೆ ಅವರಿಗೆ ವಹಿಸಲಾಗಿದೆ.

**<>><><*><><<>**

ಭಾರತೀಯ ಸಶಸ್ತ್ರ ಪಡೆಗಳ ತುಕಡಿಯು ಸೀಶೆಲ್ಸ್ ತಲುಪಿದ್ದು, ಅಲ್ಲಿನ ರಕ್ಷಣಾ ಪಡೆಗಳೊಂದಿಗೆ ೧೧ನೇ ಆವೃತ್ತಿಯ ಜಂಟಿ ಸೇನಾ ಸಮರಾಭ್ಯಾಸ ಲ್ಯಾಮಿತಿಯೆ-೨೦೨೬ ರಲ್ಲಿ ಭಾಗವಹಿಸಲಿದೆ. ಈ ಜಂಟಿ ಸಮರಾಭ್ಯಾಸ ಇಂದು ಸೀಶೆಲ್ಸ್ ರಕ್ಷಣಾ ಅಕಾಡೆಮಿಯಲ್ಲಿ ಆರಂಭವಾಗಲಿದ್ದು, ಇದೇ ೨೦ರವರೆಗೆ ಮುಂದುವರೆಯಲಿದೆ. ಅರೆ ನಗರ ಪರಿಸರದಲ್ಲಿನ ಉಪಸಾಂಪ್ರದಾಯಿಕ ಕಾರ್ಯಾಚರಣೆಗಳ ಕ್ಷೇತ್ರದಲ್ಲಿ ಪರಸ್ಪರ ಸಮನ್ವಯ ಹೆಚ್ಚಿಸುವುದು ಮತ್ತು ಶಾಂತಿ ಪಾಲನಾ ಕಾರ್ಯಾಚರಣೆ ಸಮಯದಲ್ಲಿ ಉಭಯ ಪಡೆಗಳ ನಡುವೆ ಸಹಕಾರ ಮತ್ತು ಪರಸ್ಪರ ಕಾರ್ಯ ಸಾಧ್ಯತೆ ವೃದ್ಧಿಸುವುದು ಈ ಸಮರಾಭ್ಯಾಸದ ಪ್ರಮುಖ ಉದ್ದೇಶವಾಗಿದೆ.

**<>><><*><><<>**

ಬೈರೂತ್‌ನಲ್ಲಿ ನಡೆಸಿದ ನಿಖರ ದಾಳಿಯಲ್ಲಿ ಇರಾನ್‌ನ ಐಆರ್‌ಜಿಸಿ ಪಡೆಯ ಲೆಬನಾನ್ ಘಟಕದ ಐವರು ಹಿರಿಯ ಕಮಾಂಡರ್‌ಗಳನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ರಕ್ಷಣಾ ಪಡೆ ಘೋಷಿಸಿದೆ. 'ಆಪರೇಷನ್ ರೋರಿಂಗ್ ಲಯನ್' ಹೆಸರಿನ ಈ ಕಾರ್ಯಾಚರಣೆಯಲ್ಲಿ ಲೆಬನಾನ್ ಘಟಕದ ಕಮಾಂಡರ್ ದಾವೂದ್ ಅಲಿ ಜಾದೆ, ಮಜಿದ್ ಹಸಿನಿ, ಗುಪ್ತಚರ ವಿಭಾಗದ ಕಮಾಂಡರ್ ಅಲಿ ರೇಜಾ ಬಿ-ಅಜರ್ ಮತ್ತು ಗುಪ್ತಚರ ಅಧಿಕಾರಿ ಹಸನ್ ಅಹ್ಮದ್ಲೋ ಹತರಾದವರಲ್ಲಿ ಪ್ರಮುಖರಾಗಿದ್ದಾರೆ ಎಂದು ಇಸ್ರೇಲ್ ರಕ್ಷಣಾ ಪಡೆ ತನ್ನ ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ತಿಳಿಸಿದೆ.

**<>><><*><><<>**

ಹೈದರಾಬಾದ್‌ನಲ್ಲಿ ನಡೆಯುತ್ತಿರುವ ೨೦೨೬ರ ಎಫ್‌ಐಹೆಚ್ ಮಹಿಳಾ ಹಾಕಿ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯಾವಳಿಯಲ್ಲಿ, ಭಾರತದ ಮಹಿಳಾ ತಂಡ ಇಂದು ತನ್ನ ಎರಡನೇ 'ಪೂಲ್ ಬಿ' ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡವನ್ನು ಎದುರಿಸಲಿದೆ. ಈ ಪಂದ್ಯ ಇಂದು ರಾತ್ರಿ ೮:೩೦ಕ್ಕೆ ಆರಂಭವಾಗಲಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ <>*><>**